File No. AGRI-ACT/22/2019-AGRI_PLAN_A-AGRICULTURE Secretariat

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಸಾಯನಿಕ ಗೊಬ್ಬರದ ತಾತ್ಕಾಲಿಕ ಸಂಗ್ರಹಕ್ಕಾಗಿ ಸಹಾಯಧನ ಯೋಜನೆಯಡಿ (ಲೆ.ಶೀ:2401-00-103-0-15) ರಸಗೊಬ್ಬರಗಳನ್ನು ಮಹಾಮಂಡಲದ ಗೋದಾಮುಗಳಿಂದ ಸಹಕಾರ ಸಂಘಗಳಿಗೆ ಸಾಗಾಣಿಕೆ ಮಾಡಿದಾಗ ತಗಲುವ ಹೆಚ್ಚುವರಿ ಸಾಗಾಣಿಕೆ ವೆಚ್ಚ ಪಾವತಿಸುವ ಕುರಿತು.

ಓದಲಾಗಿದೆ: 1) ದಿನಾಂಕ: 07.06.2012ರಂದು ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

2) ಸರ್ಕಾರದ ಆದೇಶ ಸಂಖ್ಯೆ: ಕೃಇ 48 ಕೃಇಕ 2018, ದಿನಾಂಕ:08.08.2018.

3) ಸರ್ಕಾರದ ಆದೇಶ ಸಂಖ್ಯೆ: ಕೃಇ 41 ಕೃಯೋಕಾ 2019, ದಿನಾಂಕ:02.04.2019.

4) ಕೃಷಿ ಆಯುಕ್ತರವರ ಪ್ರಸ್ತಾವನೆ ಸಂಖ್ಯೆ: ರಾಗೊವಿ/ಕಾದಾ/ಸಾ.ವೆಚ್ಚ/2019-20, ದಿನಾಂಕ:14.05.2019.

**ಪ್ರಸ್ತಾವನೆ:**

ಮೇಲೆ ಓದಲಾದ (1) ರಂತೆ ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಂಡಳ ನಿಯಮಿತ ವತಿಯಿಂದ ಗುರುತಿಸಲ್ಪಟ್ಟ ದಾಸ್ತಾನು ಕೇಂದ್ರಗಳಿಂದ ರಸಗೊಬ್ಬರಗಳನ್ನು ಸಹಕಾರ ಸಂಘಗಳಿಗೆ ಸಾಗಾಣಿಕೆ ಮಾಡಿದ ಸಂದರ್ಭದಲ್ಲಿ ಹೆಚ್ಚುವರಿ ಸಾಗಾಣಿಕೆ ವೆಚ್ಚವನ್ನು ಭರಿಸಬೇಕಾದ ಅನಿವಾರ್ಯತೆ ಉಂಟಾಗುತ್ತಿದ್ದರಿಂದ ಕೆಲವೊಮ್ಮೆ ರಸಗೊಬ್ಬರಗಳನ್ನು ಗರಿಷ್ಠ ಮಾರಾಟ ಮಿತಿ (M.R.P) ಯೊಳಗೆ ರೈತರಿಗೆ ಪೂರೈಸುವುದು ಕಷ್ಟವಾಗುತ್ತಿದ್ದರಿಂದ ರಸಗೊಬ್ಬರಗಳನ್ನು ಮಾಹಾಮಂಡಳದ ಗೋದಾಮುಗಳಿಂದ ಸಹಕಾರ ಸಂಘಗಳಿಗೆ ಸಾಗಾಣಿಕೆ ಮಾಡಿದಾಗ ತಗಲುವ ಹೆಚ್ಚುವರಿ ಸಾಗಾಣಿಕೆ ವೆಚ್ಚವನ್ನು 2012-13ನೇ ಸಾಲಿನಿಂದ slab-wise ದರದ ಅನ್ವಯ ಸರ್ಕಾರವೇ ಭರಿಸಲು ತೀರ್ಮಾನಿಸಲಾಗಿರುತ್ತದೆ.

ಮೇಲೆ ಓದಲಾದ (2) ರ ಸರ್ಕಾರದ ಆದೇಶದಲ್ಲಿ, 2018-19ನೇ ಸಾಲಿನಲ್ಲಿ ನೀಡಿರುವ slab-wise ದರದ ಅನ್ವಯ ಸಾಗಾಣಿಕೆ ವೆಚ್ಚವನ್ನು ಸರ್ಕಾರದಿಂದ ಪಾವತಿಸಲು ಮಂಜೂರಾತಿ ನೀಡಲಾಗಿರುತ್ತದೆ.

ಮೇಲೆ ಓದಲಾದ (3)ರ ಸರ್ಕಾರದ ಆದೇಶದಲ್ಲಿ, 2019-20ನೇ ಸಾಲಿನಲ್ಲಿ ರಾಸಾಯನಿಕ ಗೊಬ್ಬರದ ತಾತ್ಕಾಲಿಕ ಸಂಗ್ರಹಕ್ಕಾಗಿ ಸಹಾಯಧನ ಯೋಜನೆಯನ್ನು ಲೆ.ಶೀ.2401-00-103-0-15ರಡಿ ಮುಂದುವರೆಸಲಾಗಿರುತ್ತದೆ ಹಾಗೂ ಸದರಿ ಯೋಜನೆಯಡಿ ಸಾಗಾಣಿಕೆ ವೆಚ್ಚವು ಒಂದು ಘಟಕವಾಗಿರುತ್ತದೆ.

...2)

ಮೇಲೆ ಓದಲಾದ(4)ರ ಕೃಷಿ ಆಯುಕ್ತರ ಪ್ರಸ್ತಾವನೆಯಲ್ಲಿ, ರಸಗೊಬ್ಬರಗಳನ್ನು ಗರಿಷ್ಠ ಮಾರಾಟ ಮಿತಿ (M.R.P) ಯೊಳಗೆ ರೈತರಿಗೆ ಪೂರೈಕೆ ಮಾಡಲು ಅನುಕೂಲವಾಗುವಂತೆ 2019-20ನೇ ಸಾಲಿನಲ್ಲಿಯೂ ಸಹ ಸಾಗಾಣಿಕೆ ವೆಚ್ಚದ ರಿಯಾಯಿತಿಯನ್ನು ಕಾಪುದಾಸ್ತಾನು ಯೋಜನೆಯಡಿ ಸಂಗ್ರಹಿಸಿರುವ ರಸಗೊಬ್ಬರಗಳ ಪ್ರಮಾಣಕ್ಕೆ ಮಾತ್ರ ಅನ್ವಯವಾಗುವಂತೆ ಈ ಕೆಳಕಂಡ slab-wise ದರವನ್ನು ಪಾವತಿಸಲು ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

| ಕ್ರ.ಸಂ | ದೂರ ಕಿ.ಮೀ.ಗಳಲ್ಲಿ | ಪಾವತಿಸಲಾಗುವ ಸಾಗಾಣಿಕೆ ವೆಚ್ಚ (ಪ್ರತಿ ಟನ್ ಗೆ ರೂ.ಗಳಲ್ಲಿ) |
|---|---|---|
| 1 | 0-15 | 144 |
| 2 | 16-25 | 210 |
| 3 | 26-50 | 280 |
| 4 | 51-75 | 359 |
| 5 | 76-100 | 415 |
| 6 | 101-150 | 541 |
| 7 | 151-200 | 614 |

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: AGRI-ACT/22/2019, ಬೆಂಗಳೂರು, ದಿನಾಂಕ:06.08.2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ರಾಸಾಯನಿಕ ಗೊಬ್ಬರದ ತಾತ್ಕಾಲಿಕ ಸಂಗ್ರಹಕ್ಕಾಗಿ ಸಹಾಯಧನ ಯೋಜನೆಯಡಿ (ಲೆಕ್ಕ ಶೀರ್ಷಿಕೆ:2401-00-103-0-15) ರಸಗೊಬ್ಬರಗಳನ್ನು ಮಹಾಮಂಡಳದ ಗೋದಾಮುಗಳಿಂದ ಸಹಕಾರ ಸಂಘಗಳಿಗೆ ಸಾಗಾಣಿಕೆ ಮಾಡಿದಾಗ ತಗಲುವ ಸಾಗಾಣಿಕೆ ವೆಚ್ಚವನ್ನು ಈ ಕೆಳಕಂಡಂತೆ ಪಾವತಿಸಲು ಹಾಗೂ ಈ ದರಗಳನ್ನು 2019-20ನೇ ಸಾಲಿನಲ್ಲಿ ಕಾಪು ದಾಸ್ತಾನು ಯೋಜನೆಯಡಿ ಸಂಗ್ರಹಿಸಿರುವ ರಸಗೊಬ್ಬರದ ಪ್ರಮಾಣಕ್ಕೆ ಮಾತ್ರ ಅನ್ವಯವಾಗುವಂತೆ ಪಾವತಿಸಬೇಕೆಂಬ ಷರತ್ತಿನೊಂದಿಗೆ ಮಂಜೂರಾತಿ ನೀಡಿ ಆದೇಶಿಸಿದೆ.

...3)

| ಕ್ರ.ಸಂ | ದೂರ ಕಿ.ಮೀ.ಗಳಲ್ಲಿ | ಪಾವತಿಸಲಾಗುವ ಸಾಗಾಣಿಕೆ ವೆಚ್ಚ (ಪ್ರತಿ ಟನ್ ಗೆ ರೂ.ಗಳಲ್ಲಿ) |
|---|---|---|
| 1 | 0-15 | 144 |
| 2 | 16-25 | 210 |
| 3 | 26-50 | 280 |
| 4 | 51-75 | 359 |
| 5 | 76-100 | 415 |
| 6 | 101-150 | 541 |
| 7 | 151-200 | 614 |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 31 EXP-4/ 2019, ದಿನಾಂಕ:11.07.2019ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

B S Nagaratnam

(ಬಿ.ಎಸ್.ನಾಗರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ (ಯೋಜನೆ)

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1.
2. ಪ್ರಧಾನ ಮಹಾಲೇಖಪಾಲರು (ಇ&ಆರ್ ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-1.
3. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
4. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.

...4)

7. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
8. ಆಯುಕ್ತರು / ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿ-1, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಇಲಾಖೆ.
11. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
12. ಡೆಪ್ಯೂಟಿ ಡೈರೆಕ್ಟರ್ ಟಿ.ಎನ್.ಎಮ್ .ಸಿ, ಖನಿಜ ಭವನ, ಬೆಂಗಳೂರು.
13. ನಿರ್ದೇಶಕರು ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು.
14. ಜಂಟಿ ನಿರ್ದೇಶಕರು , ರಾಜ್ಯ ಹುಜೂರು ಖಜಾನೆ, ಬೆಂಗಳೂರು.
15. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಾರಾಟ ಮಹಾಮಂಡಳ ನಿಯಮಿತ, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು.
16. ಸಹಕಾರ ಸಂಘಗಳ ನಿಬಂಧಕರು, ನಂ.1, ಅಲಿಆಸ್ಕರ್ ರಸ್ತೆ, ಬೆಂಗಳೂರು-52.
17. ಸಹಕಾರ ಸಂಘಗಳ ಅಪರ ನಿಬಂಧಕರು (ಬಳಕೆ & ಮಾರಾಟ) ನಂ.1, ಅಲಿಆಸ್ಕರ್ ರಸ್ತೆ, ಬೆಂಗಳೂರು-52.
18. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ಬಿಗಮ ನಿಯಮಿತ , ಬೆಂಗಳೂರು.
19. ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ.
20. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು.
21. ಸರ್ಕಾರದ ಉಪ ಕಾರ್ಯದರ್ಶಿ-1 & 2ರವರ ಆಪ್ತ ಸಹಾಯಕರು, ಕೃಷಿ ಇಲಾಖೆ, ಬೆಂಗಳೂರು.
22. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.